26	ಆರೋಗ್ಯ ಇಲಾಖೆ	1681 60	1145 04	19353 77	14551 87	18841 42	15152 97
	ಒಟ್ಟು	85324 88	81091 38	75232 96	103102 90	101478 30	89426 59

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1276(1633)**
ಸದಸ್ಯರ ಹೆಸರು **ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ)**
ಉತ್ತರಿಸುವ ಸಚಿವರು **ಶ್ರೀ ರೇವೂನಾಯಕ್ ಬೆಳಮಗಿ**
(ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಈವರೆವಿಗೂ ಎಲ್ಲೆಲ್ಲಿ ಮೇವಿನ ಬ್ಯಾಂಕುಗಳನ್ನು ತೆರೆಯಲಾಗಿದೆ? ಇನ್ನು ಎಷ್ಟು ಮೇವು ಬ್ಯಾಂಕುಗಳನ್ನು ತೆರೆಯಲು ನಿರ್ಧರಿಸಲಾಗಿದೆ? (ವಿವರ ನೀಡುವುದು)

ದೇಣಿಗೆ ಮೂಲಕ ಸಾರ್ವಜನಿಕರ ಸಹಕಾರದೊಂದಿಗೆ ಚಿತ್ರದುರ್ಗ ಜಿಲ್ಲೆಯ ದೊಡ್ಡ ಉಳ್ಳವರ್ತಿ ಮತ್ತು ರಾಂಪುರ ಗ್ರಾಮಗಳಲ್ಲಿ ಒಣಮೇವನ್ನು ಮೇವು ನಿಧಿಗಳಲ್ಲಿ ಸಂಗ್ರಹಿಸಿಡಲಾಗಿದೆ ಯಾ ಜಿಲ್ಲೆಯಲ್ಲಿ ಮೇವಿನ ಪರಿಸ್ಥಿತಿಯನ್ನು ಲಕ್ಷಿಸಿ ಜಿಲ್ಲಾಧಿಕಾರಿಗಳಿಂದ ಮೇವು ನಿಧಿಗಳನ್ನು ತೆರೆಯುವ ಬಗ್ಗೆ ಕಂದಾಯ ಇಲಾಖೆಯಿಂದ ಸೂಚನೆಗಳನ್ನು ನೀಡಲಾಗಿದೆ

ಆ) ಅಂತರ ರಾಜ್ಯ ಮೇವು ಸಾಗಾಣಿಕೆ ಪ್ರತಿ ಬಂಧಿಸಲಾಗಿದೆಯೇ? ಸರ್ಕಾರ ಯಾವ ಯಾವ ಕೃಷಿ ಫಾರಂಗಳಲ್ಲಿ ಹಸಿರು ಹುಲ್ಲು ಬೆಳೆಯಲು ಆದೇಶಿಸಿದೆ? (ವಿವರ ನೀಡುವುದು)

ಸರ್ಕಾರದ ಆದೇಶ ಸಂಖ್ಯೆ ಕಂಇ 4 ಟಿಎಸ್‌ವೈ 2007 ದಿನಾಂಕ 22–1–2007 ರ ಅನ್ವಯ ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ಜೂನ್ 2007 ರ ವರೆಗೆ ನಿರ್ಬಂಧಿಸಲಾಗಿದೆ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್, ಕೊಪ್ಪಳ ಜಿಲ್ಲೆಯಲ್ಲಿ ಬರಪರಿಹಾರ ನಿಧಿಯಡಿಯಲ್ಲಿ ಮೇವು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ ಇವರಿಗೆ ಮೇವು ಬೆಳೆಸಲು ಬರ ಪರಿಹಾರ ನಿಧಿಯಡಿಯಲ್ಲಿ ರೂ 0 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ